# ಅಮ್ಮನ ಅವತಾರ



ಶ್ರೀದೇವಿ ಒಂದು ಕಾಲದಲ್ಲಿ ಬಾಲಿವುಡ್‌ನ 'ನಂಬರ್ ಒನ್' ಹೀರೋಯಿನ್. ಆಕೆಯ ಕಾಲ್‌ಶೀಟ್‌ಗಾಗಿ ನಿರ್ಮಾಪಕರು ಸಾಲುಗಟ್ಟಿ ನಿಂತದ್ದುಂಟು. ಆದರೆ ಈಗ ಶ್ರೀದೇವಿ ಸ್ವತಃ ನಿರ್ಮಾಪಕಿ. ಆಕೆಯ ಹೊಸ ಸಿನಿಮಾ 'ಮೋಮ್'ನ ಮೊದಲ ಟೀಸರ್ ಬಿಡುಗಡೆಯಾಗಿ ವೀಕ್ಷಕರಲ್ಲಿ ಭಾರೀ ಕುತೂಹಲ ಕೆರಳಿಸಿದೆ. ನಿರ್ದೇಶಕ ಕರಣ್ ಜೋಹರ್ ಸಹಿತ ಬಾಲಿವುಡ್‌ನ ಹಲವು ಗಣ್ಯರು ಈ ಚಿತ್ರ 2017ರ ಬಹು ನಿರೀಕ್ಷೆಯ ಚಿತ್ರ ಎಂದು ಕೊಂಡಾಡಿದ್ದಾರೆ.

ಶ್ರೀದೇವಿಯನ್ನು ಈಗಲೂ ಬಾಲಿವುಡ್‌ನ ಮೊದಲ ಮಹಿಳಾ ಸೂಪರ್‌ಸ್ಟಾರ್ ಎಂದು ಕರೆಯುವವರಿದ್ದಾರೆ. ಅದು ನಿಜವೂ ಹೌದು. ಆ ಕಾಲದಲ್ಲಿ ಅಮಿತಾಭ್ ಬಚ್ಚನ್ ಜತೆಗೆ ನಟಿಸುವ ಸಿನಿಮಾವೊಂದನ್ನು ನಿರಾಕರಿಸಿದಾಕೆ ಶ್ರೀದೇವಿ. ಅದಕ್ಕೆ ಕಾರಣ ಹೀರೋಯಿನ್‌ಗೇ ಪ್ರಾಮುಖ್ಯತೆ ಇರುವ ಸಿನಿಮಾಗಳಲ್ಲಿ ನಟಿಸುವ ಆಕೆಯ ಬಯಕೆ. ಅದರಂತೆಯೇ ಆಕೆ ಹಲವು ಚಿತ್ರಗಳಲ್ಲಿ ನಟಿಸಿ ಗೆದ್ದವಳು. ಇದೀಗ 'ಮೋಮ್' ಚಿತ್ರದ ಮೂಲಕ ಶ್ರೀದೇವಿ ಮತ್ತೊಮ್ಮೆ ಎಲ್ಲರ ಕುತೂಹಲದ ಕೇಂದ್ರಬಿಂದುವಾಗಿದ್ದಾಳೆ. ನಿರ್ಮಾಪಕ ಬೋನಿ ಕಪೂರ್ ಜತೆ ಮದುವೆಯಾದ ಬಳಿಕ 15 ವರ್ಷಗಳ ಕಾಲ ಚಿತ್ರರಂಗದಿಂದ ಹೊರಗಿದ್ದ ಶ್ರೀದೇವಿ, 2012ರಲ್ಲಿ 'ಇಂಗ್ಲಿಷ್ ವಿಂಗ್ಲಿಷ್' ಎಂಬ ಚಿತ್ರದ ಮೂಲಕ ಭರ್ಜರಿ ರೀಎಂಟ್ರಿ ಕೊಟ್ಟಿದ್ದು ಹಳೆಯ ಕಥೆ. ಆ ಚಿತ್ರ ವಿಮರ್ಶಕರ ಮೆಚ್ಚುಗೆ ಗಳಿಸಿದ್ದೇ ಅಲ್ಲದೆ ಬಾಕ್ಸ್‌ಆಫೀಸ್‌ನಲ್ಲೂ ಉತ್ತಮ ಸಾಧನೆ ನಡೆಸಿತು. ಆ ಬಳಿಕ ತಮಿಳಿನ 'ಪುಲಿ' ಎಂಬ ಕಮರ್ಷಿಯಲ್ ಚಿತ್ರದಲ್ಲಿ ಪ್ರಮುಖ ಪಾತ್ರವಿತ್ತು.

ಶ್ರೀದೇವಿಯ ಹೋಮ್ ಪ್ರೊಡಕ್ಷನ್ 'ಮೋಮ್'ನ ಮೊದಲ ಟೀಸರ್ ಎಲ್ಲರ ಹುಬ್ಬು ಮೇಲೇರಿಸಿದೆ. ಈ ಚಿತ್ರದ ನಿರ್ದೇಶಕ ರವಿ ಉದ್ಯಾವರ್. ಮಗಳ ಸಲುವಾಗಿ ಸಿಡಿದೆದ್ದ ತಾಯಿಯೊಬ್ಬಳ ಪಾತ್ರವಿದು. 'ಕೆಡುಕು ಮತ್ತು ಅತಿದೊಡ್ಡ ಕೆಡುಕಿನ ನಡುವೆ ಆಯ್ಕೆ ಬಂದಾಗ ನೀವೇನು ಮಾಡುವಿರಿ?' ಎನ್ನುವ ಪ್ರಶ್ನೆ ಮೊದಲ ಟೀಸರ್‌ನದ್ದು. ಅಂದರೆ ತಾಯಿಯೊಬ್ಬಳು ಪ್ರತೀಕಾರ ತೆಗೆದುಕೊಳ್ಳುವ ಚಿತ್ರಕಥೆ. ಚಿತ್ರದಲ್ಲಿ ಶ್ರೀದೇವಿಯ ಫಸ್ಟ್‌ಲುಕ್ ಅದ್ಭುತವೆನ್ನಿಸುವಂತಿದೆ. ಅಭಿಜಾತ ಕಲಾವಿದೆಯಾಗಿರುವ ಶ್ರೀದೇವಿ ಈ ಚಿತ್ರದ ಮೂಲಕ ಮತ್ತೊಮ್ಮೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡುವ ಎಲ್ಲ ಸಾಧ್ಯತೆಗಳಿವೆ.

# ರಜನಿಯ ಹೊಸ ಚಿತ್ರ




ರಾಜಕೀಯ ಎಂಟ್ರಿಯ ಸುಳಿವು ಕೊಟ್ಟು ಅಭಿಮಾನಿಗಳನ್ನು ತುದಿಗಾಲಲ್ಲಿ ನಿಲ್ಲಿಸಿರುವ ಸೂಪರ್‌ಸ್ಟಾರ್ ರಜನಿಕಾಂತ್, ಇದೀಗ ಮತ್ತೊಂದು ಹೊಸ ಸಿನಿಮಾದ ಘೋಷಣೆ ಮಾಡಿದ್ದಾರೆ. ಚಿತ್ರದ ಹೆಸರು ಕಾಳ. ಅದಕ್ಕೊಂದು ಅಡಿಬರಹ 'ಕರಿಕಾಳನ್'. ರಜನಿಯ ಅಳಿಯ ಧನುಷ್ ನಿರ್ಮಿಸುತ್ತಿರುವ ಈ ಹೊಸ ಚಿತ್ರ ಬಹುಶಃ ರಜನಿಯ ರಾಜಕೀಯ ಎಂಟ್ರಿಯ ಜತೆಗೇ ತಳುಕು ಹಾಕಿಕೊಳ್ಳುವ ಎಲ್ಲ ಸಾಧ್ಯತೆಗಳಿವೆ. ಜುಬ್ಬಾ ಮತ್ತು ಪಂಚೆ ಧರಿಸಿ ಜೀಪಿನ ಬಾನೆಟ್ ಮೇಲೆ ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತಿರುವ ರಜನಿಯ ಫಸ್ಟ್ ಲುಕ್ ಈಗಾಗಲೆ ಅಭಿಮಾನಿಗಳ ಹುಚ್ಚೆಬ್ಬಿಸಿದೆ.

ಕಬಾಲಿ ಚಿತ್ರದ ನಿರ್ದೇಶಕ ಪ.ರಂಜಿತ್ ಈ ಹೊಸ ಚಿತ್ರವನ್ನೂ ನಿರ್ದೇಶಿಸುತ್ತಿದ್ದಾರೆ. ಬಾಲಿವುಡ್‌ನ ಹುಮಾ ಖುರೇಶಿ ರಜನಿಯ ಹೀರೋಯಿನ್. ಜತೆಗೆ ತೆಲುಗಿನ ಅತ್ಯುತ್ತಮ ನಟಿ ಅಂಜಲಿ ಪಾಟೀಲ್ ಕೂಡಾ ಇದ್ದಾರಂತೆ. ಈಗಾಗಲೆ ರಜನಿ ನಟಿಸಿರುವ 2.0 (ಎಂಥಿರನ್ ಚಿತ್ರದ ಎರಡನೇ ಭಾಗ) ದೀಪಾವಳಿಗೆ ಬಿಡುಗಡೆ ಕಾಣಬೇಕಿತ್ತು. ಆದರೆ ಅದರ ವಿಶುವಲ್ ಎಫೆಕ್ಟ್ ಕೆಲಸ ಇನ್ನೂ ಮುಗಿದಿಲ್ಲ. ಶಂಕರ್ ನಿರ್ದೇಶನದ 2,0 ಈಗಾಗಲೆ ಎಲ್ಲರ ಕುತೂಹಲದ ಕೇಂದ್ರವಾಗಿದೆ. ಅದು ಬಿಡುಗಡೆಯಾಗುವ ಮುನ್ನವೇ 'ಕಾಳ' ಕೂಡಾ ಘೋಷಣೆ ಆಗಿರುವುದು ರಜನಿ ಅಭಿಮಾನಿಗಳ ಸಂತೋಷವನ್ನು ಇಮ್ಮಡಿಗೊಳಿಸಿದೆ.

ಕಾಳ ಚಿತ್ರದ ಕಥೆಯ ಬಗ್ಗೆ ಮೊದಲ ಸುತ್ತಿನ ವಿವಾದ ಈಗಾಗಲೆ ಆರಂಭವಾಗಿದೆ. ಇದು ಮುಂಬೈಯನ್ನು ಆಳಿದ ಸ್ಮಗ್ಲರ್ ಹಾಜಿ ಮಸ್ತಾನ್ ಕಥೆ ಎಂದು ಪ್ರಚಾರ ಶುರುವಾಗಿದೆ. ಈ ಬಗ್ಗೆ ಹಾಜಿ ಮಸ್ತಾನ್ ಕುಟುಂಬದವರು ಆಕ್ಷೇಪಗಳನ್ನು ಎತ್ತಿದ್ದು, ನಿರ್ಮಾಪಕ ಧನುಷ್ 'ಕಥೆಯ ಕುರಿತು ಗಾಳಿಮಾತು ಬೇಡ. ಹಾಜಿ ಮಸ್ತಾನ್‌ಗೂ ಈ ಚಿತ್ರಕ್ಕೂ ಸಂಬಂಧವಿಲ್ಲ' ಎಂದು ಸ್ಪಷ್ಟೀಕರಣವನ್ನೂ ನೀಡಿದ್ದಾನೆ.